I/292236/2022

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/ 90/ಸಿಡಿಸಿ(2)/2022(C-583569)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001, ದಿನಾಂಕ:29/07/2022.

**:ಸುತ್ತೋಲೆ:**

ವಿಷಯ: ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉಪನ್ಯಾಸರು / ಸಹಾಯಕ ಪ್ರಾಧ್ಯಾಪಕರುಗಳ ಉನ್ನತ ವ್ಯಾಸಂಗದ ವಿವರಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಡಿಟಿಇ / 90 / ಸಿಡಿಸಿ(2) / 2021 ದಿನಾಂಕ :24-09-2021

*****

ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜು /ಪಾಲಿಟೆಕ್ನಿಕ್ ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರು ಪೂರ್ಣ ಕಾಲಿಕ ನೆಲೆಯಲ್ಲಿ ಎಂ.ಟೆಕ್ ಹಾಗೂ ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕಾಗಿ ನಿಯೋಜನೆ ಹೊಂದಿದ ನಂತರ ನಿಯಮಾನುಸಾರ ವ್ಯಾಸಂಗದ ಪ್ರಗತಿಯನ್ನು 6 ತಿಂಗಳಿಗೊಮ್ಮೆ ಹಾಗೂ ಹಾಜರಾತಿಯ ಪ್ರಮಾಣ ಪತ್ರಗಳನ್ನು ಪ್ರತಿ ತಿಂಗಳಿಗೊಮ್ಮೆ ಮಾತ್ರ ಸಂಸ್ಥೆಗೆ ತಪ್ಪದೆ ಕಳುಹಿಸಬೇಕಾಗಿರುತ್ತದೆ. ಸಂಸ್ಥೆಯ ಪ್ರಾಂಶುಪಾಲರು ಉನ್ನತ ವ್ಯಾಸಂಗಕ್ಕಾಗಿ ನಿಯೋಜಿತರಾಗಿರುವ ಬೋಧಕ ಸಿಬ್ಬಂದಿಯವರ ವ್ಯಾಸಂಗದ ಪ್ರಗತಿ ಹಾಗೂ ಹಾಜರಾತಿಯ ವಿವರವನ್ನು https:dtetech.karnataka.gov.in/dteone/emp/login.aspx ಪೋರ್ಟಲ್ ನಲ್ಲಿ ನಿಯಮಿತವಾಗಿ ನಮೂದಿಸಲು ತಿಳಿಸಲಾಗಿದೆ.

ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿಹೆಚ್.ಡಿ ವ್ಯಾಸಂಗಕ್ಕೆ ನಿಯೋಜಿತರಾದ ಉಪನ್ಯಾಸಕರು / ಸಹಾಯಕ ಪ್ರಾಧ್ಯಾಪಕರು ನಿಯಮಾನುಸಾರ ಉನ್ನತ ವ್ಯಾಸಂಗದಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಿಲ್ಲದಿದ್ದರೆ ಅಥವಾ ನಿಗದಿತ ಕಾಲಮಿತಿಯೊಳಗೆ ವ್ಯಾಸಂಗವನ್ನು ಪೂರ್ಣಗೊಳಿಸದಿದ್ದಲ್ಲಿ ಅಥವಾ ಉನ್ನತ ವ್ಯಾಸಂಗಕ್ಕೆ ಬಿಡುಗಡೆ ಹೊಂದಿ ವ್ಯಾಸಂಗ ಪೂರ್ಣಗೊಳಿಸದೆ ಪುನಃ ಸಂಸ್ಥೆಯಲ್ಲಿ ವರದಿ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಿದ್ದರೆ ಅಂತಹ ಉಪನ್ಯಾಸಕರ ವಿವರಗಳನ್ನು ಸಂಸ್ಥೆಯ ಪ್ರಾಂಶುಪಾಲರು ಕೂಡಲೇ ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.

ಮುಂದುವರೆದು 2016-17, 2017-18 ಮತ್ತು 2018-19 ಸಾಲಿನಲ್ಲಿ ಪೂರ್ಣ ಕಾಲಿಕ ನೆಲೆಯಲ್ಲಿ ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜು /ಪಾಲಿಟೆಕ್ನಿಕ್ ಗಳಿಂದ ನಿಯೋಜನೆ ಹೊಂದಿದ ಉಪನ್ಯಾಸಕರ / ಸಹಾಯಕ ಪ್ರಾಧ್ಯಾಪಕರುಗಳ ಪ್ರಗತಿಯ ವಿವರ ಅಥವಾ ಪಿಹೆಚ್.ಡಿ ಪದವಿ ಪತ್ರ, ಉನ್ನತ ವ್ಯಾಸಂಗದಿಂದ ಬಿಡುಗಡೆ ಹೊಂದಿದ ಪತ್ರ ಮತ್ತು ವ್ಯಾಸಂಗ ಮುಗಿಸಲು ಹೆಚ್ಚಿನ ಕಾಲಾವಕಾಶ ತೆಗೆದುಕೊಂಡಲ್ಲಿ ಸರ್ಕಾರದ ಆದೇಶದ ಪ್ರತಿಯನ್ನು ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.

ಮೇಲೆ ತಿಳಿಸಿದ ವಿವರಗಳನ್ನು ಸಂಸ್ಥೆ / ಕಾಲೇಜುಗಳ ಪ್ರಾಂಶುಪಾಲರುಗಳು jointdirector.cdc@gmail.com ಇ-ಮೇಲ್ ಮೂಲಕ ದಿನಾಂಕ:08-08-2022 ಒಳಗಾಗಿ ತಪ್ಪದೆ ಕಳುಹಿಸಲು ಸೂಚಿಸಲಾಗಿದೆ.

**ಜಂಟಿ ನಿರ್ದೇಶಕರು(ಸಿಡಿಸಿ).**

ಇವರಿಗೆ:

1. ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.